ಹರಪನಹಳ್ಳಿ ತಾಲ್ಲೂಕಿನ ಮುಡ್ಲಗೇರಿ ತಾಂಡದಲ್ಲಿ ಸಂಭವಿಸಿದ ಬೆಂಕಿ ಅನಾಹುತ

೯೭೫ ಶ್ರೀ ಬಿ. ಹೆಚ್. ಯಂಕಾನಾಯ್ಕ್(ಹರಪನಹಳ್ಳಿ).—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಹರಪನಹಳ್ಳಿ ತಾಲ್ಲೂಕಿನ ಮುಡ್ಲಗೇರಿ ಮತ್ತು ಇತರ ತಾಂಡಗಳಲ್ಲಿ ದಿನಾಂಕ ೨೦ನೇ ಮೇ ೧೯೫೫ರಂದು ಉಂಟಾದ ಬೆಂಕಿ ಅಪಘಾತದಲ್ಲಿ ನಾಲ್ಕು ಲಕ್ಷ ರೂಪಾಯಿಗಳಷ್ಟು ಆಸ್ತಿ ನಾಶವಾಗಿದ್ದರೂ ೭೫ ಲಂಬಾಣಿ ಕುಟುಂಬಗಳಿಗೆ ಕೇವಲ ೧೯,೫೦೦ ರೂ.ಗಳನ್ನು ತಾತ್ಕಾಲಿಕವಾಗಿ ಪರಿಹಾರ ನೀಡಲಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಆ) ಸದರೀ ಸಂಬಂಧದಲ್ಲಿ ಹೆಚ್ಚಿನ ಮೊತ್ತದ ಪರಿಹಾರ ಕೋರಿ ಮನವಿಗಳೇನಾದರೂ ಬಂದಿದೆಯೇ?

ಇ) ಹಾಗಿದ್ದಲ್ಲಿ ಕೋರಿರುವ ಪರಿಹಾರವನ್ನು ಇಲಾಖಾ ಮುಖೇನವಾಗಲಿ ಅಥವಾ ಮಂಜ್ರಿ ಮಂತ್ರಿಯವರ ಪರಿಹಾರನಿಧಿಯಿಂದಾಗಲಿ ನೀಡಲು ಸರ್ಕಾರದವರಂ ಕ್ರಮ ತೆಗೆದುಕೊಳ್ಳುವರೇ ?

ಶ್ರೀ ವಿ. ಎಲ್. ಪಾಟೀಲ್(ಸಮಾಜ ಕಲ್ಯಾಣ ಮಂತ್ರಿಗಳು).—

ಅ) ಸದರೀ ಗ್ರಾಮದಲ್ಲಿ ಒಟ್ಟು ೬೫ ಗುಡಿಸಲುಗಳು ಬೆಂಕಿಗೆ ಆಹುತಿಯಾಗಿದ್ದು, ಪರಿಹಾರ ಧನಕ್ಕೆ ಅರ್ಹವಾದ ೬೦ ಕುಟುಂಬಗಳಿಗೆ ೧೮,೦೦೦–೦೦ ರೂ.ಗಳನ್ನು ನಗದು ಪರಿಹಾರಧನ ಮತ್ತು ೨೨ ಕ್ವಿಂಟಾಲ್ ಆಹಾರಧಾನ್ಯಗಳನ್ನು ವಿತರಿಸಲಾಗಿದೆ.

ಆ) ಇಲ್ಲ.

ಇ) ಉದ್ಭವಿಸುವುದಿಲ್ಲ.

ಹರಪನಹಳ್ಳಿ ತಾಲ್ಲೂಕಿನಲ್ಲಿನ ವಿತ ನೀರಾವರಿ ಯೋಜನೆ

೯೭೬ ಶ್ರೀ ಬಿ. ಹೆಚ್. ಯಂಕಾನಾಯ್ಕ(ಹರಪನಹಳ್ಳಿ).—ಮಾನ್ಯ ನೀರಾವರಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಹರಪನಹಳ್ಳಿ ತಾಲ್ಲೂಕು ಕಡತಿ, ಪಟ್ಲಹಳ್ಳಿ ಗ್ರಾಮಗಳ ವಿತ ನೀರಾವರಿ ಯೋಜನೆಗಳು ಸರಿಯಾಗಿ ಕಾರ್ಯನಿರ್ವಹಿಸದೆ, ಬಡ ಜನರಿಗೆ ಬಹಳ ತೊಂದರೆಯಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಸರ್ಕಾರದವರು ಸದರೀ ಯೋಜನೆಯನ್ನು ಸರಿಯಾಗಿ ನಿರ್ವಹಿಸುವಂತೆ ಮಾಡಲು ತೆಗೆದುಕೊಂಡಿರುವ ಕ್ರಮಗಳೇನು ?

ಶ್ರೀ ಹೆಚ್. ಡಿ. ದೇವೇಗೌಡ(ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು).—

ಅ) ಸಾದು.

ಆ) ಕಡತಿ ವಿತ ನೀರಾವರಿ ಯೋಜನೆಯ ಕಾಲುವೆಯ ಉದ್ದಕ್ಕೂ ಲೈನಿಂಗ್ ಮಾಡುವ ಮತ್ತು ಪಟ್ಲಹಳ್ಳಿ ವಿತ ನೀರಾವರಿ ಯೋಜನೆಯ ಇನ್‌ಟೇಕ್‌ವೆಲ್ ಮತ್ತು ಇನ್‌ಟೇಕ್ ಛಾನಲಿನ ರಿಪೇರಿ ಕಾರ್ಯಗಳನ್ನು ನದಿಯಲ್ಲಿ ನೀರು ಕಡಿವೆಯಾದ ನಂತರ ಕೈಗೊಳ್ಳುವ ಪ್ರಶ್ನೆ ಪರಿಶೀಲನೆಯಲ್ಲಿದೆ.

ಅರಣ್ಯ ಪ್ರದೇಶದಲ್ಲಿರುವ ಉಪ್ಪಾರೆ ಹಣ್ಣಿನ ಮರಗಳು ನಾಶವಾಗುತ್ತಿರುವುದು.

೯೭೯ ಶ್ರೀ ಗೋಪಾಲ ಮುಕುಂದ ಕಾನಡೆ(ಶಿರಸಿ).—ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಸಿರಸಿ, ಸಿದ್ದಾಪುರ ತಾಲ್ಲೂಕುಗಳಲ್ಲಿ ಅರಣ್ಯ ಪ್ರದೇಶದಲ್ಲಿರುವ ಉಪ್ಪಾರೆ ಹಣ್ಣಿನ ಮರಗಳನ್ನು ಕಡಿಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಅ) ಈ ಹಣ್ಣಿನಿಂದ ಸರ್ಕಾರಕ್ಕೆ ಏನಾದರೂ ಲಾಭವಿದೆಯೇ ?

ಇ) ಈ ಬಗ್ಗೆ ೧೯೮೫-೮೬ನೇ ಸಾಲಿನ ಟೆಂಡರನ್ನು ಯಾರಿಗೆ ಮತ್ತು ಎಷ್ಟು ರೂಪಾಯಿ ಗಳಿಗೆ ಕೊಡಲಾಗಿದೆ ?

ಶ್ರೀ ಬಿ. ಎ. ಜೀವಿಜಯ(ಅರಣ್ಯ ರಾಜ್ಯ ಮಂತ್ರಿಗಳು).—

ಅ) ಇಲ್ಲ.

ಆ) ಹೌದು.

ಇ) ಉಪ್ಪರಿಗೆ ಹಣ್ಣುಗಳನ್ನು ಸಂಗ್ರಹಿಸಿಕೊಳ್ಳಲು ಕೃಷಿ ಮತ್ತು ಕ್ಷೀರ ಉತ್ಪಾದಕರ ವಿವಿದೋದ್ದೇಶ ಸಹಕಾರ ಸಂಘ ನಿಯಮಿತ, ಬಕ್ಕಳಿ ಇವರಿಗೆ ೨ ವರ್ಷಗಳ ಅವಧಿಗೆ ೧೮ಲಕ್ಷ ರೂ.ಗಳ ಕರಾರು ಒಪ್ಪಂದ ಮೇರೆಗೆ ನೀಡಲಾಗಿದ್ದು ಆ ಅವಧಿಯು ೩೦ನೇ ಜೂನ್ ೧೯೮೭ಕ್ಕೆ ಮುಗಿಯುತ್ತದೆ.

ರಾಜ್ಯದಲ್ಲಿರುವ ಆನೆಗಳು

೧೨೮೧ ಶ್ರೀ ಗೋಪಾಲ ಮುಂಕುಂದ ಕಾನಡೆ(ಶಿರಸಿ).—ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕರ್ನಾಟಕ ರಾಜ್ಯದಲ್ಲಿರುವ ಆನೆಗಳ ಸಂಖ್ಯೆ ಎಷ್ಟು ?

ಆ) ಕಳೆದ ೨ ವರ್ಷಗಳಲ್ಲಿ ಮರಣ ಹೊಂದಿರುವ ಆನೆಗಳ ಸಂಖ್ಯೆ ಎಷ್ಟು ? ಹಾಗೂ ಅವುಗಳಲ್ಲಿಗಂಡು ಮತ್ತು ಹೆಣ್ಣು ಆನೆಗಳು ಎಷ್ಟು ?

ಇ) ಮರಣ ಹೊಂದಲು ಕಾರಣಗಳೇನು ?

ಶ್ರೀ ಬಿ. ಎ. ಜೀವಿಜಯ(ಅರಣ್ಯ ರಾಜ್ಯ ಸಚಿವರು ಉತ್ತರಿಸುವರು).—

ಅ) ೧೯೮೫ರ ಏಪ್ರಿಲ್ ೩೦ ರಂದು ನಡೆಸಿದ ಆನೆಗಳ ಗಣತಿ ಪ್ರಕಾರ ಒಟ್ಟು ೩೫೯೯ ಆನೆಗಳು ಕಂಡು ಬಂದಿದೆ. ಅವುಗಳಲ್ಲಿ ೭೦೪ ಗಂಡು, ೨೦೬೮ ಹೆಣ್ಣು ಮತ್ತು ೮೦೭ ಎಳೆಯು ವಯಸ್ಸಿನವು ಇವೆ.

ಅ) ಆನೆಗಳು	೧೯೮೩-೮೪	೧೯೮೪-೮೫
ಗಂಡು	೨೮	೨೨
ಹೆಣ್ಣು	೧೫	೧೦
ಒಟ್ಟು ಸಂಖ್ಯೆ	೪೩	೩೨

ಇ) ಆನೆಗಳ ಮರಣ ಸ್ವಾಭಾವಿಕ ಸಾವು ಮತ್ತು ಕೆಲವು ಆನೆ ಹಂತಕರಿಂದ ನಡೆದಿದೆ. ವಿವರಗಳು ಈ ಕೆಳಗಿನಂತಿವೆ.—

	ಆನೆಗಳು ೧೯೮೩-೮೪		ಆನೆಗಳು ೧೯೮೪-೮೫	
	ಗಂಡು	ಹೆಣ್ಣು	ಗಂಡು	ಹೆಣ್ಣು
ಹಂತಕರಿಗೆ ಬಲಿಯಾದವುಗಳು	೨೩	—	೬	—
ಸ್ವಾಭಾವಿಕ ಸಾವು	೫	೧೫	೧೬	೧೦
ಒಟ್ಟು	೨೮	೧೫	೨೨	೧೦